11)	ಬಳ್ಳಾರಿ	07-05-64	86
12)	ಯಾದಗೀರ್-ನಾರಾಯಣ ಪೇಟೆ	16-07-64	01
13)	ಗುಲ್ಬರ್ಗಾ ಸೇಡಂ	20-05-65	01
14)	ಕನಕಪುರ	24-12-65	29
15)	ಮಂಗಳೂರು	08-10-64	31
16)	ಶಿವಮೊಗ್ಗ	20-03-67	48
17)	ಕೋಲಾರ	25-01-68	87
18)	ಗುಲ್ಬರ್ಗಾ-ಬೀದರ್	06-11-85	203
19)	ಚಿತ್ರದುರ್ಗ-ದಾವಣಗೆರೆ	23-09-87	01
20)	ರಾಯಚೂರು	03-11-87	174
		ಒಟ್ಟು	1454

2) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು (ಬೆಂಗಳೂರು ನಗರ ಸಾರಿಗೆ ಸಂಸ್ಥೆ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯನ್ನು ಒಳಗೊಂಡಂತೆ) ರಾಷ್ಟ್ರೀಕರಣವಾಗಿರುವ ಮಾರ್ಗಗಳಲ್ಲಿ ವಾಹನಗಳ ಕಾರ್ಯಚರಣೆ ಮಾಡುತ್ತಿದೆ. ಈ ಅನುಸೂಚಿಗಳು ರಾಷ್ಟ್ರೀಕರಣ ವಲಯದಲ್ಲಿ ಸಮರ್ಪಕವಾದ ಸಾರಿಗೆ ಸೌಲಭ್ಯವನ್ನು ಕಲ್ಪಿಸುತ್ತಿವೆ.

3) ಪ್ರಶ್ನೆ (2)ರ ಉತ್ತರದಿಂದ ಉದ್ಭವಿಸುವುದಿಲ್ಲ.

ಉತ್ತರಹಳ್ಳಿ ಮತ ಕ್ಷೇತ್ರಕ್ಕೆ ಬರುವ ವೀರಭದ್ರ ನಗರವನ್ನು ಪಟ್ಟಣಗೆರೆ ನಗರಸಭೆಯ ವ್ಯಾಪ್ತಿಗೆ ಸೇರಿಸಿಕೊಳ್ಳುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 901(1474)

ಸದಸ್ಯರ ಹೆಸರು: ಶ್ರೀ ಅಶೋಕ್ ಆರ್.(ಉತ್ತರಹಳ್ಳಿ)

ಪ್ರಶ್ನೆ

ಅ) ಉತ್ತರಹಳ್ಳಿ ಮತಕ್ಷೇತ್ರಕ್ಕೆ ಬರುವ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಹೊಸಕೆರೆ ದಾಖಲೆ ವೀರಭದ್ರ ನಗರವು ಬೆಂಗಳೂರು ಮಹಾನಗರಪಾಲಿಕೆಯ ವಾರ್ಡ್ ನಂ.54ಕ್ಕೆ ಅಂಟಿಕೊಂಡಿರುವ ಪ್ರದೇಶವಾಗಿದ್ದು, ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯವು ಈ ಪ್ರದೇಶವು ಬೆಂಗಳೂರು ಮಹಾನಗರಪಾಲಿಕೆಯ ಯಾವುದೇ ವ್ಯಾಪ್ತಿಗೆ ಸೇರಿಲ್ಲವೆಂದು ರಿಟ್ ಪಿಟಿಷನ್ ನಂ.29186:96ರಲ್ಲಿ ದಿನಾಂಕ 1-12-1997 ರಂದು ತನ್ನ ತೀರ್ಪು ನೀಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಅಂದಿನಿಂದ ಇಂದಿನವರೆಗೆ ಈ ಬಡಾವಣೆಯನ್ನು ಮಹಾನಗರಪಾಲಿಕೆಗೆ ಕೇಳಿಕೊಂಡಿರುವ ಬಗ್ಗೆ ತಿದ್ದುಪಡಿ ಆಥವಾ ಅಧಿಸೂಚನೆ ಏನಾದರೂ ಹೊರಡಿಸಲಾಗಿರುವೆಯೇ?

ಇ) ಮಹಾನಗರಪಾಲಿಕೆಗೆ ಸೇರಿಲ್ಲದಿರುವ ಈ ಬಡಾವಣೆಯನ್ನು ಪಟ್ಟಣಗೆರೆ ನಗರಸಭೆಯ ವಾರ್ಡ್ ನಂ.26ಕ್ಕೆ ಅಂಡಿಕೊಂಡಿದ್ದು, ಪಟ್ಟಣಗೆರೆ ನಗರಸಭೆಗೆ ಸೇರಿಸಲು ಪ್ರಸ್ತಾವನೆಯು ಸರ್ಕಾರದಲ್ಲಿ 1998 ರಿಂದಲೂ ಇದ್ದು ಈ ಬಡಾವಣೆಯು ಪಟ್ಟಣಗೆರೆ ನಗರಸಭೆಗೆ ಸೇರಿಸದಿರಲು ಕಾರಣವೇನು? ಮತ್ತು ಸೇರಿಸಿಕೊಂಡಲ್ಲಿ ಆಗುವ ನ್ಯೂನತೆಗಳು ಯಾವುವು?

ಉತ್ತರಿಸುವ ಸಚಿವರು: ಎಂ.ಮಲ್ಲಿಕಾರ್ಜುನ ನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)

ಉತ್ತರ

ಅ) ರಿಟ್ ಅರ್ಜಿ ಸಂಖ್ಯೆ: 29186:96ರಲ್ಲಿ ವೀರಭದ್ರ ನಗರವನ್ನು ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಗೆ ಸೇರಿಸುವ ಬಗ್ಗೆ ನಿರ್ದೇಶಿಸಲು ಪ್ರಾರ್ಥಿಸಿದ್ದರು. ಸದರಿ ರಿಟ್ ಅರ್ಜಿಯನ್ನು ಉಚ್ಚ ನ್ಯಾಯಾಲಯವು ಸಂವಿಧಾನದ 243ಝಡ್‌ಜಿ ಪರಿಚ್ಛೇದದ ಕಾರಣದಿಂದಾಗಿ ವಜಾ ಮಾಡಿದೆ.

ಆ) ಇಲ್ಲ

ಇ) ಹೊಸಕೆರೆ ದಾಖಲೆ ವೀರಭದ್ರ ನಗರವನ್ನು ಪಟ್ಟಣಗೆರೆ ನಗರಸಭೆಗೆ ಸೇರಿಸುವ ಬಗ್ಗೆ ಜಿಲ್ಲಾಧಿಕಾರಿಗಳಿಂದ ಪ್ರಸ್ತಾವನೆ ಬಂದಿದೆ. ಅದರಂತೆ ವಿಷಯವನ್ನು ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಯಲಚಂಕ ಉಪನಗರದ 5ನೇ ಹಂತಕ್ಕೆ ಸಾರಿಗೆ ಎಕ್ಸ್‌ಪ್ರೆಸ್ ಬಸ್.